# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 192 |
| ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನ ಚಾಮುಂಡಿ ಬೆಟ್ಟದ ಅಭಿವೃದ್ಧಿಗಾಗಿ ರಚಿಸಲಾಗಿರುವ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾದ ಕಾಮಗಾರಿಗಳ ಪ್ರಗತಿ ಎಷ್ಟು; | ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಸಾರ್ವಜನಿಕ ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಲು ಚಾಮುಂಡಿ ಬೆಟ್ಟದ ಅಭಿವೃದ್ಧಿಗಾಗಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಪರಿಸರ ಸಂರಕ್ಷಣೆ ಮತ್ತು ಮೂಲಸೌಕರ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಪರಿಸರ ಸಂರಕ್ಷಣೆ ಮತ್ತು ಮೂಲ ಸೌಕರ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಕ್ರಮದ ಬಗ್ಗೆ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

ಸಂಖ್ಯೆ:ಕಂಇ 14 ಮುಸಪ್ರ 2026

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರ
**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**
ಕಾರ್ಯದರ್ಶಿಯವರ ಕಾರ್ಯಾಲಯ ಚಾಮುಂಡಿಬೆಟ್ಟ, ಮೈಸೂರು - 570 010
ದೂರವಾಣಿ ಸಂ:: 0821 2590027, 2590082 e-mail:- eochamunditemple@gmail.com

## ಪ್ರಸ್ತುತ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ

| ಕ್ರ ಸಂ | ವಿಷಯ | ನಿರ್ವಹಿಸುವ ಇಲಾಖೆ | ಅಂದಾಜು ಪಟ್ಟಿ ಮೊತ್ತ |
|---|---|---|---|
| 1 | ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದ ಎಡಭಾಗದಲ್ಲಿನ ರೂ. 100 ಗಳ S.S. 'O' Railings ನ ಪ್ರವೇಶದ ಸರತಿ ಸಾಲನ್ನು ಭಕ್ತಾದಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಸರತಿ ಸಾಲು ಹಾಗೂ ಮೇಲ್ಭಾಗದಲ್ಲಿ ಗ್ಯಾಲ್ವನೈಜ್ಡ್ ಶೀಟನ್ನು ಅಳವಡಿಕೆ ಹಾಗೂ ಸರತಿ ಸಾಲಿನ ನಿರ್ಮಾಣ ಪ್ರದೇಶದಲ್ಲಿ ಕಲ್ಲಿನ ಚಪ್ಪಡಿ ನೆಲಹಾಸನ್ನು ಹಾಕುವ ಕಾಮಗಾರಿ | EE.PWD, MYSURU | Rs.30.00 Lak. |
| 2 | ಮೈಸೂರು .ಎಂ ಜಿ ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ತುರ್ತು ದುರಸ್ಥಿ ಮತ್ತು ಬಣ್ಣದ ಕಾಮಗಾರಿ. | EE.PWD, MYSURU | Rs.99.99 Lak. |
| 3 | ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಹೊಸದಾಗಿ ನಿರ್ಮಿಸಿರುವ ಗೋಶಾಲೆಯಲ್ಲಿ ಅತ್ಯವಶ್ಯಕವಾಗಿ ಆಗಬೇಕಾದ ಕಾಮಗಾರಿ. | ನಿರ್ಮಿತಿ ಕೇಂದ್ರ | Rs.20.10 Lak. |
| | **ಪ್ರಾಧಿಕಾರಕ್ಕೆ ಸೇರಿದ ಶ್ರೀ ಚಾಮುಂಡೇಶ್ವರಿ ಹಾಗೂ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರುಗಳ ಹೆಸರಿನಲ್ಲಿದ್ದ ಜಮೀನುಗಳನ್ನು ಹಲವಾರು ವರ್ಷಗಳಿಂದ ಖಾಸಗಿಯವರ ಒತ್ತುವರಿ ಬಿಡಿಸಿ, ಸರ್ಕಾರದ ವಶಕ್ಕೆ ಪಡೆಯಲಾಗಿ ಸದರಿ ಜಾಗದ ಹದ್ದು ಬಸ್ತುಗಳಿಗಾಗಿ ತುರ್ತಾಗಿ ಸಿಮೆಂಟ್ ಪಿಲ್ಲರ್ ಮತ್ತು ಸ್ಲಾಬ್ ನಿಂದ ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಿ, ಪ್ರಾಧಿಕಾರದ ವಶಕ್ಕೆ ಪಡೆಯಲಾಗಿದೆ.** | | |
| 4 | ಮೈಸೂರು ತಾಲ್ಲೂಕಿನ ಸರ್ಕಾರಿ ಉತ್ತನಹಳ್ಳಿ ಗ್ರಾಮದ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಮ್ಮನವರ ದೇವರ ಹೆಸರಿನಲ್ಲಿರುವ ಸರ್ವೆ ನಂ. 197/1 ರಲ್ಲಿನ 2.00 ಎಕರೆ ಜಮೀನಿಗೆ ಖಾಯಂ ಆಗಿ ಕಾಂಪೌಂಡ್ ನಿರ್ಮಾಣ ಮಾಡುವ ಸಂಬಂಧ, ಹೊಸದಾಗಿ ಸಿಮೆಂಟ್ ಪಿಲ್ಲರ್ ಮತ್ತು ಸ್ಲಾಬ್ ನಿಂದ ಗಟ್ಟಿಮುಟ್ಟಾದ ಕಾಂಪೌಂಡ್ ನಿರ್ಮಾಣ ಕಾಮಗಾರಿ | ನಿರ್ಮಿತಿ ಕೇಂದ್ರ | Rs. 12.00 Lak. |
| 5 | ಮೈಸೂರು ತಾಲ್ಲೂಕಿನ ಸರ್ಕಾರಿ ಉತ್ತನಹಳ್ಳಿ ಗ್ರಾಮದ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಮ್ಮನವರ ದೇವರ ಹೆಸರಿನಲ್ಲಿರುವ ಸರ್ವೆ ನಂ. 163 ರಲ್ಲಿನ 4.34 ಎಕರೆ ಜಮೀನಿಗೆ ಖಾಯಂ ಕಾಂಪೌಂಡ್ ನಿರ್ಮಾಣ ಮಾಡುವ ಸಂಬಂಧ, ಹೊಸದಾಗಿ ಸಿಮೆಂಟ್ ಪಿಲ್ಲರ್ ಮತ್ತು ಸ್ಲಾಬ್ ನಿಂದ ಗಟ್ಟಿಮುಟ್ಟಾದ ಕಾಂಪೌಂಡ್ ನಿರ್ಮಾಣ ಕಾಮಗಾರಿ | ನಿರ್ಮಿತಿ ಕೇಂದ್ರ | Rs. 41.20 Lak. |
| 6 | ಮೈಸೂರು ತಾಲ್ಲೂಕು, ಹಡಜನ ಗ್ರಾಮದಲ್ಲಿ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹೆಸರಿನಲ್ಲಿರುವ ಸರ್ವೆ ನಂ. 81/4 ರಲ್ಲಿ 2.22 ಎಕರೆ ಮತ್ತು 81/5 ರಲ್ಲಿ 3.22 ಎಕರೆ ಸೇರಿ ಒಟ್ಟು 6.18 ಎಕರೆ ಜಮೀನಿಗೆ ಸಿಮೆಂಟ್ ಕಾಂಪೌಂಡ್ ನಿರ್ಮಾಣ ಕಾಮಗಾರಿ. | ನಿರ್ಮಿತಿ ಕೇಂದ್ರ | Rs.40.00 Lak. |

ಕಾರ್ಯದರ್ಶಿ,
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಚಾಮುಂಡಿಬೆಟ್ಟ, ಮೈಸೂರು.

ಅನುಬಂಧ-2

ಕರ್ನಾಟಕ ಸರ್ಕಾರ

**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**

ಕಾರ್ಯದರ್ಶಿಯವರ ಕಾರ್ಯಾಲಯ ಚಾಮುಂಡಿಬೆಟ್ಟ, ಮೈಸೂರು - 570 010

ದೂರವಾಣಿ ಸಂ.: 0821-2590027, 2590082 e-mail:- eochamunditemple@gmail.com

ಸಂ: ಎಸ್.ಸಿ.ಕೆ.ಡಿ.ಎ:2 ಸಿ.ಆರ್: LAQ/2025-26 ದಿನಾಂಕ 27/01/2026

**ಪರಿಸರ ಸಂರಕ್ಷಣೆ ಮತ್ತು ಮೂಲಸೌಕರ್ಯಗಳನ್ನು ಕೈಗೊಂಡಿರುವ ಬಗ್ಗೆ**

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಶೇಕಡ 80 ರಷ್ಟು ನಿಷೇಧಿಸಲಾಗಿದೆ. ಈ ಸಂಬಂಧ ಭಕ್ತಾಧಿಗಳಿಗೆ ಪ್ಲಾಸ್ಟಿಕ್ ಬ್ಯಾಗ್ ಬದಲಿಗೆ ಬಟ್ಟೆ ಬ್ಯಾಗ್ ನ್ನು ಉಪಯೋಗಿಸಲು ತಿಳುವಳಿಕೆ ನೀಡಿ ಮಾರಾಟ ಮಾಡಲಾಗುತ್ತಿದೆ ಹಾಗೂ ರೂ. 1,000/- ಟಿಕೇಟ್ ಪಡೆದ ಭಕ್ತಾಧಿಗಳಿಗೆ ಮಾತ್ರ ಪ್ರಸಾದವನ್ನು ದೇವಾಲಯದ ವತಿಯಿಂದ ಬಟ್ಟೆ ಬ್ಯಾಗ್ ಮೂಲಕ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

ಚಾಮುಂಡಿಬೆಟ್ಟಕ್ಕೆ ಪ್ಲಾಸ್ಟಿಕ್ ಬಾಟಲ್ ಮೂಲಕ ಕುಡಿಯುವ ನೀರನ್ನು ತರುವುದನ್ನು ಪ್ರವೇಶ ದ್ವಾರಗಳಲ್ಲಿ ನಿಷೇಧಿಸಲು ಕ್ರಮ ವಹಿಸಲಾಗುತ್ತಿದ್ದು, ಶುದ್ಧ ಕುಡಿಯುವ ನೀರಿನ (RO) ಘಟಕವನ್ನು ದಾಸೋಹ ಭವನದ ಮುಂಭಾಗ, ವಾಹನ ನಿಲ್ದಾಣ ಪ್ರದೇಶದಲ್ಲಿ ಹಾಗೂ ದೇವಾಲಯದ ಎಡಭಾಗದಲ್ಲಿ ನಿರ್ಮಿಸಿ ಭಕ್ತಧಿಗಳಿಗೆ ಅನುಕೂಲ ಕಲ್ಪಿಸಲಾಗಿದೆ.

ಚಾಮುಂಡಿಬೆಟ್ಟದ ಸುತ್ತಲಿನ ಆವರಣದಿಂದ ಮೈಹಿಷಾಸುರ ಪ್ರತಿಮೆಯವರೆಗೆ ಪ್ರತಿ ನಿತ್ಯ ಸ್ವಚ್ಚಗೊಳಿಸಲು ಒಟ್ಟು 35 ಜನರನ್ನು ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ ಹಾಗೂ ಮಹಿಷಾಸುರ ಪ್ರತಿಮೆಯಿಂದ ತಾವರೆಕಟ್ಟೆಯವರೆಗೆ ಆಗಿದಾಗ್ಗೆ ಹೊರಗುತ್ತಿಗೆ ನೌಕರರಿಂದ ಸ್ವಚ್ಚತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದೊಂದಿಗೆ ನಮ್ಮ ಮೈಸೂರು ಫೌಂಡೇಷನ್ ಸಂಸ್ಥೆಯವರು ಒಡಂಬಡಿಕೆ ಮಾಡಿಕೊಂಡು, ಸದರಿ ಸ್ವಯಂ ಸೇವಕರುಗಳು ಪ್ರತಿ ನಿತ್ಯ ಸಂಗ್ರಹವಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ವಿಲೇವಾರಿ ಮಾಡಲು ಪ್ರಾಧಿಕಾರದ ಘನ ತ್ಯಾಜ್ಯ ಘಟಕಕ್ಕೆ ದೇವಾಲಯದ ಹೊರಗುತ್ತಿಗೆ ನೌಕರರು ಕಾಂಪೋಸ್ಟ್ ಗೊಬ್ಬರವನ್ನಾಗಿ ಸಿದ್ಧಪಡಿಸಿ ಮಾರಾಟ ಮಾಡಲು ಕ್ರಮ ವಹಿಸಲಾಗುತ್ತಿದೆ.

ಮೈಸೂರಿನಲ್ಲಿರುವ ಹಲವಾರು ಸ್ವಯಂ ಸಂಘ ಸಂಸ್ಥೆಯವರು, ವಿದ್ಯಾರ್ಥಿಗಳು ಹಾಗೂ ಖಾಸಗಿ ಕಂಪನಿಯವರುಗಳು ಆಗಿಂದಾಗ್ಗೆ ಮೆಟ್ಟಿಲುಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಹಾಗೂ ದೇವಾಲಯದ ಆವರಣಗಳಲ್ಲಿ ಸ್ವಚ್ಚತಾ ಕಾರ್ಯವನ್ನು ಹಮ್ಮಿಕೊಳ್ಳುತ್ತಿರುತ್ತಾರೆ.

ಸಾರ್ವಜನಿಕ ಭಕ್ತಾಧಿಗಳ ಮಾಹಿತಿಗಾಗಿ ರಸ್ತೆ ಬದಿಗಳಲ್ಲಿ ಪರಿಸರ ಸಂರಕ್ಷಣೆ ಸಂಬಂಧ ಹಲವಾರು ನಾಮಫಲಕಗಳನ್ನು ಅಳವಡಿಸಿ ಜಾಗೃತಿ ಮೂಡಿಸಲಾಗಿದೆ ಹಾಗೂ ಶಾಲಾ ಮಕ್ಕಳು ಗ್ರಾಮಪಂಚಾಯಿತಿ ಸಹಯೋಗದಲ್ಲಿ ಹಲವಾರು ಬಾರಿ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಜಾಥಾ ಕಾರ್ಯಾಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಚಾಮುಂಡಿಬೆಟ್ಟದ ಬಹುಮಹಡಿ ವಾಹನ ನಿಲುಗಡೆ ಪ್ರದೇಶದಲ್ಲಿ ಒಟ್ಟು 4 ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದ್ದು ಹಾಗೂ ಶ್ರೀಯವರ ದೇವಾಲಯದ ಎಡ ಭಾಗದಲ್ಲಿ 2 ಶೌಚಾಲಯಗಳನ್ನು ನಿರ್ಮಾಣ ಮಾಡಿ ಭಕ್ತಾಧಿಗಳಿಗೆ ಅನುಕೂಲ ಕಲ್ಪಿಸಿಕೊಡಲಾಗಿದೆ.

ಕಾರ್ಯದರ್ಶಿ,
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಚಾಮುಂಡಿಬೆಟ್ಟ, ಮೈಸೂರು